ಬೋರ್‌ವೆಲ್‌ಗಳನ್ನು ಹಾಕಿಸಬೇಕಾದರೆ ಅಲ್ಲಿ ಹಣ ಇಲ್ಲ. ಆದ್ದರಿಂದ ನಮ್ಮ ಜಿಲ್ಲೆಗೆ ವಿಶೇಷ ನೆರವು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯನಿಯವರ ಜಿಲ್ಲೆಯಲ್ಲಿ ಅಂತಹ ವಿಶೇಷ ಸಮಸ್ಯೆಗಳು ಇದ್ದರೆ ಅವುಗಳನ್ನು ನನ್ನ ಗಮನಕ್ಕೆ ತಂದರೆ ಮುಚ್ಚುಮರೆ ಇಲ್ಲದೆ ಸ್ವಲ್ಪ ಹೆಚ್ಚು ಕಡಿಮೆ ಹಣ ಬಿಡುಗಡೆಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಜಿ. ಎಸ್. ರಾಮದಾಸ್.—ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆ ಇತ್ತು.

ಶ್ರೀ ಪಟ್ಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಪ್ರಶ್ನೆ ಇತ್ತು.

ಶ್ರೀ ಎನ್. ಭುಭಾಕರ್ ರಾಣೆ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಪ್ರಶ್ನೆ ಇತ್ತು. ಯಾವಾಗ ಬರುತ್ತದೆ ಎನ್ನುವುದನ್ನು ಖಚಿತವಾಗಿ ಹೇಳಿದರೆ ಒಳ್ಳೆಯದು.

ಅಧ್ಯಕ್ಷರು.—ಹೇಳುತ್ತೇನೆ. ತಾವು ಕುಳಿತುಕೊಳ್ಳಿ.

ಶ್ರೀಮತಿ ನಾಗರತ್ನಮ್ಮನವರೇ. ಈಗ ಪ್ರಶ್ನೋತ್ತರ ವೇಳೆ ಮುಗಿದಿದೆ. ಆದರೂ ಸಹ ಮಾನ್ಯ ಸದಸ್ಯರ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡುವುದಕ್ಕೆ ಹೋಗುವುದಿಲ್ಲ. ಯಾವ ಸದಸ್ಯರು ಪ್ರಶ್ನೆಯನ್ನು ಕೇಳಿರುತ್ತಾರೋ ಅವರು ಮಾತ್ರ ಎರಡೆರಡು ಪ್ರಶ್ನೆಗಳನ್ನು ಕೇಳಬೇಕು. ಅದಕ್ಕಿಂತ ಹೆಚ್ಚು ಕೇಳಬಾರದು. ಆ ರೀತಿ ಇದ್ದರೆ ಮಾತ್ರ ಈ ಪ್ರಶ್ನೆಗಳನ್ನು ತೆಗೆದುಕೊಳ್ಳೋಣ. ಈಗ ಶ್ರೀ ರಾಮದಾಸ್ ರವರು ಪ್ರಶ್ನೆ ಕೇಳಬಹುದು.

ಹೊಸದುರ್ಗ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ತೊಂದರೆ ಬಗ್ಗೆ

೬೫೬. ಶ್ರೀ ಬಿ. ರಾಮದಾಸ್ (ಹೊಸದುರ್ಗ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ಯ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಮಳೆಯ ಅಭಾವ ಪರಿಸ್ಥಿತಿಯಿಂದ ಕುಡಿಯುವ ನೀರಿನ ಬಗ್ಗೆ ಅನೇಕ ಗ್ರಾಮಗಳಲ್ಲಿ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಸರ್ಕಾರದವರು ಇದರ ಬಗ್ಗೆ ಕೈಕೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ಯ ಮತ್ತು ವಕ್ಫ್ ಸಚಿವರು).—

ಅ) ಬಂದಿದೆ.

ಆ) ತೊಂದರೆಗೊಳಗಾಗಿರುವ ಹಳ್ಳಿಗಳ ಸಮೀಕ್ಷೆ ಮಾಡಲಾಗಿದ್ದು ಕುಡಿಯುವ ನೀರಿನ ತೊಂದರೆ ಪರಿಹರಿಸಲು ಕ್ರಮ ಕೈಗೊಳ್ಳಲಾಗಿದೆ.

ಮಾನ್ಯ ಅಧ್ಯಕ್ಷರೇ, ಇದರ ಜೊತೆಗೆ ಇನ್ನು ಸ್ವಲ್ಪ ಮಾಹಿತಿಯನ್ನು ಕೊಟ್ಟರೆ ಮಾನ್ಯ ಸದಸ್ಯರಿಗೆ ಸಮಾಧಾನವಾಗಬಹುದು. ಸುಮಾರು ೯ ಹಳ್ಳಿಗಳಲ್ಲಿ ಕೊಳವೆ ಬಾವಿಗಳು ಕೆಟ್ಟಿರುವ ದೂರುಗಳು ಬಂದಿವೆ, ಇನ್ನು ಹಲವಾರು ಹಳ್ಳಿಗಳಲ್ಲಿ ನೀರಿನ ಕಡಿಮೆಯಾಗುತ್ತಿರುವ ವರದಿಗಳು ಬಂದಿವೆ. ಅದರಲ್ಲಿ ಮುಖ್ಯವಾಗಿ ೧೧ ಹಳ್ಳಿಗಳಲ್ಲಿ ಇನ್ನು ಸವಳು ಮತ್ತು ಬೇರೆ ಹೋಗಿರುವುದರಿಂದ ನಾಲ್ಕು ಕೊಳವೆ ಬಾವಿಗಳಲ್ಲಿ ನೀರು ಇಲ್ಲ. ಅಂದರೆ ಉಪಯೋಗಿಸುವುದಕ್ಕೆ ಆಗಿಲ್ಲ. ಆದ್ದರಿಂದ ಒಟ್ಟು ೩೦ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಬರಪರಿಹಾರ ಕಾಮಗಾರಿಗಳಲ್ಲಿ ಅಥವಾ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ಈ ಕೆಲಸವನ್ನು ತೆಗೆದುಕೊಳ್ಳಿ ಎಂದು ನಾನು ಜಿಲ್ಲಾ ಪರಿಷತ್ತಿಗೆ ಆದೇಶ ಕೊಡುತ್ತೇನೆ.

ಶ್ರೀ ಜಿ. ಎಸ್. ರಾಮದಾಸ್.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಅನೇಕ ಕೊಳವೆ ಬಾವಿಗಳು ಕೆಟ್ಟಿವೆ. ಆ ಕೊಳವೆ ಬಾವಿಗಳನ್ನು ರಿಪೇರಿ ಮಾಡುವುದಕ್ಕೆ ವಾಹನಗಳು ಇಲ್ಲದೆ ಇರುವುದರಿಂದ

ಯಾರೂ ಬರುತ್ತಿಲ್ಲ. ಅಲ್ಲಿ ಒಂದು ಆಫೀಸ್ ಇಲ್ಲ. ರಿಗ್ ಯಂತ್ರಗಳು ಇಲ್ಲ. ಆದ್ದರಿಂದ ತಕ್ಷಣ ಒಂದು ಆಫೀಸ್ ಮಾಡಿ ಅಲ್ಲಿ ಒಂದು ವಾಹನ ಕೊಡಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಇದು ಹೊಸ ಡಿವಿಸನ್ ಆದ್ದರಿಂದ ಸ್ವಲ್ಪ ತೊಂದರೆಯಾಗಿದೆ ಈ ತೊಂದರೆಯನ್ನು ಪರಿಹಾರ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿನ ನೀರಿನ ಸರಬರಾಜುಗಳ ಬಗ್ಗೆ

೫೧೯. ಶ್ರೀ ಎಸ್. ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿ ವಾಹನ ಬಾಡಿಗೆ ಹಾಗೂ ಡಿಸೇಲ್ ಬಾಬ್ತು ಬಾಕಿ ಪಾವ್ತಿಮಾಡದಿರುವುದರಿಂದ ವಾಹನಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡುವುದು ನಿಂತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಹಣ ಬಿಡುಗಡೆ ಮಾಡಿ ನೀರು ಸರಬರಾಜು ಮಾಡಲು ಪುನಹ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ವಾಹನದಿಂದ ಸಾಗಣೆ ಮಾಡುತ್ತಿರುವ ನೀರು ಸರಬರಾಜು ನಿಲ್ಲಿಸಿಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್ ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ವಾಹನದ ಬಾಡಿಗೆ ಮತ್ತು ಡೀಸಲ್ ಬಿಲ್ ಕೊಡದೆ ಇರುವುದರಿಂದ ಕುಡಿಯುವ ನೀರಿನ ಸಾಗಾಣಿಕೆ ನಿಂತಿದೆ. ನೀರು ಸಾಗಾಣಿಕೆ ಮಾಡಿರುವ ಹಣವನ್ನು ಎಷ್ಟು ದಿನಗಳಲ್ಲಿ ಬಿಡುಗಡೆ ಮಾಡುತ್ತೀರಿ ಎಂದು ತಿಳಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಕುಡಿಯುವ ನೀರಿನ ಸಾಗಾಣಿಕೆ ನಿಂತಿದೆ ಎಂದು ಹೇಳಿದ್ದಾರೆ. ಅದರ ಬಾಬತ್ತಿನ ಹಣವನ್ನು ಕೂಡಲೇ ಬಿಡುಗಡೆ ಮಾಡುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಎಷ್ಟು ದಿನದಲ್ಲಿ ಬಿಡುಗಡೆ ಮಾಡುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಒಂದು ವಾರದಲ್ಲಿ ಮಾಡಿಸುತ್ತೇನೆ.

ಇಲಕಲ್ ಮತ್ತು ಹುನಗುಂದ ಪಟ್ಟಣಗಳಿಗೆ ಹಾಗೂ ಮಾರ್ಗದಲ್ಲಿನ ೧೨ ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಸಮಗ್ರ ಯೋಜನೆಯ ಬಗ್ಗೆ.

೫೫೫. ಶ್ರೀ ಶಿವಸಂಗಪ್ಪ ಸಿದ್ದಪ್ಪ ಕಡಪಟ್ಟಿ (ಹುನಗುಂದ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುನಗುಂದ ಇಲಕಲ್ ಹಾಗೂ ಹನ್ನೆರಡು ಸಮಸ್ಯಾತ್ಮಕ ಕುಡಿಯುವ ನೀರಿನ ಯೋಜನೆಯಲ್ಲಿ ಕೃಷ್ಣಾ ನದಿಯ ನೀರನ್ನು ಒದಗಿಸುವುದಾಗಿ ಭರವಸೆ ಕೊಟ್ಟಿದ್ದನ್ನು ಸರಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ ?

ಇ) ಸದರಿ ಸಮಸ್ಯಾತ್ಮಕ ಹಳ್ಳಿಗಳಿಗೆ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?